ಶ್ರೀ ಕಡಿದಾಳ್ ಮಂಜಪ್ಪ.—ಏರೇಜ್ ರಿಸರ್ವ್ ನಿಗದಿ ಮಾಡಿರುವುದು ಬಹಳ ವರ್ಷಗಳ ಹಿಂದೆ. ಆಗಿನಿಂದ ಒಂದೇ ರೀತಿಯಲ್ಲಿ ನಡೆದುಕೊಂಡು ಬಂದಿದೆ. ಕೆಲವುಕಡೆ ಏರೇಜ್ ರಿಸರ್ವ್ ಬೇಡ, ಡಿ.ಡಿ.ಟಿ. ಉಪಯೋಗಿಸಿ ಮಲೇರಿಯಾ ತಡೆಗಟ್ಟಬಹುದು ಎಂದು ಹೇಳುತ್ತಿದ್ದಾರೆ. ಯಾವುದಾದರೂ ಗ್ರಾಮದಿಂದ ತಾವು ಹೇಳಿದಂತೆ ಮನವಿ ಬಂದರೆ ಪರ್ಯಾಲೋಚಿಸುತ್ತೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಡ್ರೈಬೆರ್ಟ್ ಮಾಡಿರುವುದರ ಉದ್ದೇಶವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಮಲೇರಿಯಾ ರೋಗವನ್ನು ತಪ್ಪಿಸುವುದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹಾಗಿರುವಾಗ ಪುನಃ ನೀರು ಕೊಡುವುದರಿಂದ ಮಲೇರಿಯಾ ಪುರುವಾಗುತ್ತದೆ, ಎರಡು ಫರ್ಲಾಂಗ್ ಎಂದು ಹೇಳಿರುವುದಕ್ಕೆ ಬದಲಾಗಿ ನಾಲ್ಕೈದು ಫರ್ಲಾಂಗ್ ವರೆಗೆ ರಿಸರ್ವ್ ಬಿಡುತ್ತಿರುವುದನ್ನು ಪರಿಶೀಲಿಸುತ್ತೀರಾ ಎಂದು ಕೇಳುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಈಗ ಎರಡು ಫರ್ಲಾಂಗಿನೊಳಗೇ ನೀರು ಕೊಡಬೇಕೆಂದು ಮನವಿ ಬಂದಿದೆ.

Sri B. Y. NEELE GOWDA.—May I know whether this question was raised at the Board meeting and whether it was examined ?

Sri Kadidal MANJAPPA.—I think the matter was referred to the Health Committee.

Sri B. Y. NEELE GOWDA.—May I know whether the Health Committee have taken any decision and sent their opinion ?

Sri Kadidal MANJAPPA.—I do not think we have received any report.

Sri B. Y. NEELE GOWDA.—May I know whether this question does not require reconsideration in the light of the invention of preventive measures to check malaria ?

Sri Kadidal MANJAPPA.—We are guided by the opinion of experts of the Health Department.

Sri B. Y. NEELE GOWDA.—May I know whether these preventive measures have not decreased the attack of malaria ?

Mr. SPEAKER.—Government say that they are mainly guided by the opinion of the Health Department.

Sri B. Y. NEELE GOWDA.—I want to know whether D.D.T. spraying and other preventive measures have reduced the effect of malaria.

Sri Kadidal MANJAPPA.—D.D.T. has controlled malaria to a great extent.

Sri B. Y. NEELE GOWDA.—May I know whether it is not necessary to examine the question afresh ?

Sri Kadidal MANJAPPA.—This can be considered at the meeting of the Health Committee.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಹೆಲ್ತ್ ಇಲಾಖೆಯವರು ಎರಡು ಫರ್ಲಾಂಗುಗಳಿಗಿಂತ ಕಡಮೆ ಡ್ರೈಬೆರ್ಟ್ ಬಿಡಬಾರದೆಂದು ನೂಚಿಸಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ನೂಚಿಸಿದ್ದಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಹಾಗಿರುವಾಗ ಎರಡು ಫರ್ಲಾಂಗಿಗಿಂತ ಕಡಮೆ ಬಿಟ್ಟಿರುವಕಡೆ ನರಿ ಪಡಿನಲು ಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶೀಲನಬೇಕು. ಈಗ ನಿರ್ಧಾರವಾಗಿ ಹೇಳಲಾರೆ.

Nirsardi System.

Q.—646. **Sri S. SIDDAPPA** (Magadi).—

Will the Government be pleased to state :—

(*a*) whether they are aware that the existing system of Nirsardi in the State is causing great inconvenience to the people ;

(*b*) whether they would discontinue this system ?

A.—**Sri Kadidal MANJAPPA** (Minister for Revenue and Public Works).—

(*a*) No.

(*b*) This does not arise in view of reply to question above.

ಶ್ರೀ ಎಸ್. ಸಿದ್ದಪ್ಪ.—ಈಗಿರುವ ನೀರಾವರಿ ಕಾನೂನು ಲೋಪ ದೋಷಗಳಿಂದ ಕೂಡಿದೆಯೆಂಬುದನ್ನು ನನ್ನ ಪ್ರಶ್ನೆಯಿಂದ ಅರ್ಥಮಾಡಿಕೊಂಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಚೆನ್ನಾಗಿ ಅರ್ಥಮಾಡಿಕೊಂಡೇ ಉತ್ತರವನ್ನು ಸುಲಭವಾಗಿ ಕೊಟ್ಟಿದ್ದೇವೆ.

ಶ್ರೀ ಎಸ್. ಸಿದ್ದಪ್ಪ.—ಹಾಗಾದರೆ ಈಗಿರುವ ನೀರಾವರಿ ಕಾನೂನು ಲೋಪದೋಷಗಳಿಂದ ಕೂಡಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಪ್ರಶ್ನೆ ಅರ್ಥವಾಗಲಿಲ್ಲ, ಇರಿಗೇಷ್ ಆಕ್ಟಿನ ವಿಚಾರವಾಗಿ ಹೇಳುತ್ತಿದ್ದೀರೋ ಅಥವಾ ನೀರು ನರದಿ ವಸೂಲು ಮಾಡುವ ನಿಬಂಧನೆ ವಿಚಾರ ಹೇಳುತ್ತಿದ್ದೀರೋ ?

ಶ್ರೀ ಎಸ್. ಸಿದ್ದಪ್ಪ.—ನೀರು ನರದಿ ಕಾನೂನಿನ ಪ್ರಕಾರ ಅನುಮತಿಯಿಲ್ಲದೆ ನೀರನ್ನು ಬಳಸಿದ್ದರೆ ಉಪಯೋಗಿಸುವ ಕಾನೂನಿನ ವಿಚಾರದಲ್ಲಿ ನಾನು ಹೇಳುತ್ತಿರುವುದು.

ಶ್ರೀ ಕಡಿದಾಳ್ ಮಂಜಪ್ಪ.—ಈಗಿರುವ ಕಾನೂನು ಸಮರ್ಪಕವಾಗಿದೆ.

ಶ್ರೀ ಎಸ್. ಸಿದ್ದಪ್ಪ.—ರೈತರು ನೀರನ್ನು ಪಯೋಗಿಸಿದರೆ ಎಷ್ಟು ವರ್ಷಗಳ ಕಂದಾಯ ಕೊಟ್ಟ ಮೇಲೆ ಖಾಯಂ ಮಾಡುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದ ಅಥವಾ ಸಂಬಂಧಪಟ್ಟ ಆಫೀಸ್ ಅನುಮತಿ ಪಡೆದು ಸರ್ಕಾರದ ನೀರನ್ನು ಉಪಯೋಗಿಸಿದರೆ ತರಿ ಕಂದಾಯಕ್ಕೂ ಖುಷ್ಕಿ ಕಂದಾಯಕ್ಕೂ ಇರುವ ವ್ಯತ್ಯಾಸದ ಎರಡರಷ್ಟು ಮೊಬಲನ್ನು ವಸೂಲುಮಾಡಲಾಗುವುದು. ಅಕ್ರಮವಾಗಿ ಅನುಮತಿಯಿಲ್ಲದೆ ನೀರನ್ನು ಉಪಯೋಗಿಸಿದರೆ ಆಗ ಸ್ವಲ್ಪ ತಾಪತ್ರಯ ಬರುತ್ತದೆ. ಆಗ ಮೊದಲೇ ಹೇಳಿದ ಹಾಗೆ ಎರಡರಷ್ಟು ಮೊಬಲಗು ಮತ್ತು ಕಂದಾಯದ ಐದರಷ್ಟು ಮೊಬಲಗು ಹೆನಾಲ್ಟಿ ರೂಪವಾಗಿ ಕೊಡುವುದಕ್ಕೆ ಬದ್ಧನಾಗುತ್ತಾನೆ.

ಶ್ರೀ ಎಸ್. ಸಿದ್ದಪ್ಪ.—ಈ ಹೆನಾಲ್ಟಿ ಸರ್ಕಾರ ವಸೂಲು ಮಾಡಿದ ಮೇಲೆ ಸುಮಾರು ಐದು ವರ್ಷದ ನೀರು ಸರದಿ ತೆಗೆದುಕೊಂಡ ಮೇಲೆ ಖಾಯಂ ಮಾಡ ಬೇಕೆಂದು ಇದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎಸ್. ಸಿದ್ದಪ್ಪ.—ಈ ರೀತಿಯಾಗಿ ಯಾವತ್ತೂ ತಾವು ಹಾಕುವ ಡಬ್ಬಲ್ ಕಂದಾಯ ಕೊಡಬೇಕೆ?

ಶ್ರೀ ಕಡಿದಾಳ್ ಮಂಜಪ್ಪ.—ಅಕ್ರಮವಾಗಿ ನೀರನ್ನು ಉಪಯೋಗಿಸುವವರು ಇದ್ದರೆ ಅವರಿಗೆ ಕಾನೂನು ಪ್ರಕಾರ ಹಕ್ಕು ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಹಾಗಾದರೆ ತೆಗೆದುಕೊಳ್ಳ ಕೂಡದೆಂದು ನಿರ್ದಿಷ್ಟವಾಗಿ ಹೇಳುವುದಕ್ಕಾಗುವು ದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ತೆಗೆದುಕೊಳ್ಳಕೂಡ ದೆಂದು ಕಾನೂನಿದೆ. ವಿರುದ್ಧವಾಗಿ ತೆಗೆದುಕೊಂಡಿರು ವುದಕ್ಕೆ ಜುಲ್ಮಾನೆ ವಾಟರ್ ರೇಟಿನ ನಾಲ್ಕರಷ್ಟು ಹಾಕುವುದು.

ಶ್ರೀ ಎಸ್. ಸಿದ್ದಪ್ಪ.—ಈಗ ರೈತಾಪಿ ಜನರಿಗೆ ಕಷ್ಟವಾಗಿರುವುದರಿಂದ ಈಗಿರುವ ಕಾನೂನನ್ನು ಮಾರ್ಪಾಡುಮಾಡಿ ರೈತರಿಗಿರುವ ಕಷ್ಟಪರಂಪರೆ ಯನ್ನು ನಿವೃತ್ತಿಮಾಡಲು ಅವಕಾಶ ಕಲ್ಪಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನಿಗನುಸಾರವಾಗಿ ನೀರು ತೆಗೆದುಕೊಂಡರೆ ತೊಂದರೆಯಾಗುವುದಿಲ್ಲ. ರೈತರು ಕಾನೂನಿಗೆ ವಿರುದ್ಧವಾಗಿ ಯಾರಿಗೂ ಹೇಳದೆ ಕೇಳದೆ ನೀರನ್ನು ತೆಗೆದುಕೊಂಡಾಗ ಸ್ವಾಭಾವಿಕವಾಗಿ ತೊಂದರೆ ಆಗಲೇಬೇಕು, ಅನುಭವಿಸಲೇಬೇಕು.

ಶ್ರೀ ಎಸ್. ಸಿದ್ದಪ್ಪ.—ಅಮಲ್ದಾರರಿಗೆ ಅರ್ಜಿ ಕೊಟ್ಟು ಅದರ ಮೇಲೆ ನೀರನ್ನು ಉಪಯೋಗಿಸಿದಾಗ ಎಷ್ಟು ದಿವಸಕ್ಕೆ ಖಾಯಂ ಆಗಿ ನೀರನ್ನು ಕೊಡಲಾಗುವುದು?

ಶ್ರೀ ಕಡಿದಾಳ್ ಮಂಜಪ್ಪ.—ಅನುಮತಿ ಪಡೆದಿದ್ದರೆ, ಜಲಾಶಯದಲ್ಲಿ ಸಾಕಾದಷ್ಟು ನೀರು ಕೊಡಲು ಅವಕಾಶವಿದ್ದರೆ ಜಾಗ್ರತೆ ಕೊಡಲು ಅವಕಾಶವಾಗುತ್ತದೆ; ಅಚ್ಚುಕಟ್ಟುದಾರರೂ ಒಪ್ಪಬೇಕು.

ಶ್ರೀ ಎಸ್. ಸಿದ್ದಪ್ಪ.—ಐದು ವರ್ಷ ಕಾಲ ಕಂದಾಯ ಸರ್ಕಾರ ತೆಗೆದುಕೊಂಡ ಮೇಲೆ ಒಪ್ಪಿದ ಹಾಗಾಗುವುದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗಾಗುವುದಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹತ್ತು ವರ್ಷ ಹಣ ತೆಗೆದುಕೊಂಡಿರುವಾಗಲೂ ಖಾಯಂ ಮಾಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು; ಅಕ್ರಮವಾಗಿರುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಒಂದು ಯೂನಿಟ್ಟಿಗೆ, ಒಂದು ಎಕರೆಗೆ ಇಷ್ಟು ನೀರು ಬೇಕೆಂಬ ಲೆಕ್ಕಾಚಾರ ವಿದೆ. ಬೇಕಾದಷ್ಟು ತರಿಗೆ ಅವಕಾಶವಿರುವ ಕಡೆ ಎಲ್ಲರೂ ಕೊಡಬೇಕೆಂದು ಹೇಳಿದಾಗಲೂ ಒಬ್ಬರಿಗೆ ಕೊಡದಿರುವುದು ಸರಿಯೆ?

ಶ್ರೀ ಕಡಿದಾಳ್ ಮಂಜಪ್ಪ.—ಹೆಚ್ಚಾಗಿ ನೀರಿದ್ದರೆ ಅನೇಕ ಸಂದರ್ಭಗಳಲ್ಲಿ ಈಗಲೂ ಕೊಡುತ್ತಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ನೀರು ಕೊಡಲು ಮಹಜರಾಗಬೇಕೆಂದು ಹೇಳಿದ ಮೇಲೆ ಆ ರೀತಿ ಮಾಡಿ ಅಚ್ಚುಕಟ್ಟುದಾರರೆಲ್ಲಾ ಒಪ್ಪಿದ ಮೇಲೂ ಕೂಡ ಒಬ್ಬರಿಗೆ ಅವಕಾಶ ಕೊಡದಿರುವುದು ಅವಗಾಹನೆಗೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನೀರಿಷ್ಟಿದೆ, ಎಷ್ಟು ವಿಸ್ತೀರ್ಣದ ನೀರಾವರಿಗೆ ಅನುಕೂಲವಾಗುತ್ತದೆ ಎಂಬುದನ್ನು ನೋಡಿ ಹಳ್ಳೇ ಅಚ್ಚುಕಟ್ಟುದಾರರಿಗೆ ತೊಂದರೆಯಾಗದಿದ್ದರೆ ಕೊಡಬಹುದು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅಚ್ಚುಕಟ್ಟುದಾರರು ಕೊಡಬಹುದೆಂದು ಒಪ್ಪಿದರೂ ಒಬ್ಬರಿಗೆ ಕೊಡುವುದ ಕ್ಕಾಗುವುದಿಲ್ಲವೆಂದು ತಕರಾರು ಮಾಡಬಹುದೆ? ಅಂಥ ಸಂದರ್ಭಗಳಲ್ಲಿ ಪರಿಶೀಲನುವುದಕ್ಕಾಗುವುದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಊಹಾ ಪೋಹದ ಪ್ರಶ್ನೆ. ನಿರ್ದಿಷ್ಟವಾಗಿ ಗಮನಕ್ಕೆ ತಂದರೆ ಪರಿಶೀಲನುತ್ತೇವೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಕಂದಾಯದ ವ್ಯತ್ಯಾಸದ ಎರಡರಷ್ಟು ಕೊಡಬೇಕೆಂದು ಹೇಳ ಲಾಯ್ತು. ಎರಡು ಕಡೆ ನೀರಾವರಿಯಿದ್ದು ಮಧ್ಯೆ ಖುಷ್ಕಿಯಿದ್ದರೆ ಅನಿವಾರ್ಯವಾದರೆ ಯಾವ ತರಹ ಕಂದಾಯ ನಿಗದಿ ಮಾಡಲಾಗುವುದು?

ಶ್ರೀ ಕಡಿದಾಳ್ ಮಂಜಪ್ಪ.—ಮೊದಲು ಕಾಂಗಾರಿ ಪ್ರಾರಂಭಿಸುವಾಗ ಎಷ್ಟು ವಿಸ್ತೀರ್ಣ ನೀರಾವರಿಗೆ ಬರುತ್ತದೆಂದು ನಿಗದಿಮಾಡಿ ಲೋಕಲೈಸ್ ಮಾಡುತ್ತಾರೆ. ಅದಕ್ಕಿಂತ ಹೆಚ್ಚು ವಿಸ್ತೀರ್ಣ ಮಧ್ಯೆ ಅಥವಾ ಇನ್ನೊಂದು ಕಡೆ ಇದ್ದರೆ ಅದಕ್ಕೆ ನೀರು ಕೊಡಲು ಜಲಾಶಯದಲ್ಲಿ ನೀರಿಷ್ಟಿದೆಯೆಂಬುದನ್ನು ನೋಡಿ ತೀರ್ಮಾನಮಾಡಬೇಕಾಗುತ್ತದೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಕನ್ನಂಬಾಡಿ ಕೆರೆ ಹಿಂಭಾಗದಲ್ಲಿ ಸುಮಾರು 30—40 ಜನರಿಗೆ ಸೇರಿದಂಥ ಜಮೀನುಗಳು ಹೀಗೆ ಮಧ್ಯೆ ಇದ್ದುಕೊಂಡು ಅವು ಖುಷ್ಕಿ ಬೆಳೆಯಲು ಅಡ್ಡಿಯಾಗಿ ತರೀ ಫನಲು ಮಾಡಿದ್ದರಿಂದ ಒಂದಕ್ಕೆ ಐದರಷ್ಟು ಜುಲ್ಮಾನೆ ಹಾಕಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಅಕ್ರಮವಾಗಿ ಸಾಗುವಳಿ ಮಾಡಿದ್ದರೆ ಜುಲ್ಮಾನೆ ಹಾಕುವುದು ಸ್ವಾಭಾವಿಕವಾಗಿದೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಅವರು ವಿಧಿಯಿಲ್ಲದೆ ತರಿಗೋಸ್ಕರ ನೀರು ತೆಗೆದುಕೊಂಡಿದ್ದರೆ?

ಶ್ರೀ ಕಡಿದಾಳ್ ಮಂಜಪ್ಪ.—ವಿಧಿಯಿಲ್ಲದೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಅವರ ಜಮೀನಿನ ಎರಡು ಕಡೆಯೂ ತರೀ ಜಮೀನುಗಳಿದ್ದು ಮಧ್ಯೆ ಖುಷ್ಕಿ ಮಾಡಲು ಅನುಕೂಲವಿಲ್ಲದೆ ಇದ್ದಾಗ ನೀರನ್ನು ತೆಗೆದುಕೊಂಡಿದ್ದಕ್ಕೆ ಹಾಕಿರುವುದು ಸರಿಯೇ?

ಶ್ರೀ ಕಡಿದಾಳ್ ಮಂಜಪ್ಪ.—ವಿಧಿಯಿಲ್ಲದೆ ಹೋಗಿ ಕಾನೂನಿಗೆ ವಿರುದ್ಧವಾಗಿ ತೆಗೆದುಕೊಂಡಿದ್ದರೆ, ಅಂಥ ನಿದರ್ಶನಗಳನ್ನು ಸರ್ಕಾರದವರ ಗಮನಕ್ಕೆ ತಂದರೆ ಪರ್ಯಾಲೋಚನೆಮಾಡುತ್ತೇವೆ. ಆ ವಿಚಾರದಲ್ಲಿ ಒಂದು representation ಕೂಡ ಬಂದಿದ್ದ ನೆನಪು.

ಶ್ರೀ ಎಣ್. ಹುಚ್ಚಮಾಸ್ತಿಗೌಡ.—ಹಂಗಾಮಿಯಾಗಿ ನೀರು ಸರದಿ ತೆಗೆದುಕೊಳ್ಳುವವರ ಕಾಟದಿಂದ ಅಚ್ಚು

(ಶ್ರೀ ಎಚ್. ಹುಚ್ಚಮಾಸ್ತಿಗೌಡ.)

ಕಚ್ಚೆಲ್ಲಾ ಸಂಪೂರ್ಣವಾಗಿ ಹೋಗಿರುವ ಸಂದರ್ಭಗಳ ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೂ ಕೆಲವು ಸಂದರ್ಭಗಳಿರಬಹುದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಹಂಗಾಮಿ ನೀರು ಸರದಿಗೆ ಕೊಡುವುದರಲ್ಲಿ ರೈತರ ಅಭಿಪ್ರಾಯ ಅಷ್ಟು ಪ್ರಾಮುಖ್ಯವಲ್ಲವೆಂಬುದನ್ನು ಒಪ್ಪುತ್ತಿರಾ?

ಶ್ರೀ ಕಡಿದಾಳ್ ಮಂಜಪ್ಪ.—ರೈತರ ಅಭಿಪ್ರಾಯದ ಜೊತೆಗೆ ಇಂಜಿನಿಯರುಗಳ ಅಭಿಪ್ರಾಯವೂ ಮುಖ್ಯವೇ.

Public Health and other Acts (Cases launched)

Q.—214. Sri T. HANUMAIYA (Hiriyur—Scheduled Castes).—

Will the Government be pleased to state:—

(*a*) when the Public Health Act, Prevention of Animal Sacrifices Act, Prevention of Cow Slaughter Act and Temple Entry Authorisation Act, etc., were put into force;

(*b*) whether there is any staff sanctioned to give effect to the above Acts;

(*c*) how many cases have been launched in the State under each enactment during the year 1953-54?

A.—Sri H. SIDDAVEERAPPA (Minister for Home and Industries).—

(*a*) (i) Public Health Act ... 12-1-1944.
(ii) Prevention of Animal Sacrifice Act ... 25-7-1948.
(iii) Prevention of Cow Slaughter Act... 24-7-1948.
(iv) Temple Entry Authorisation Act 7-2-1948.

(*b*) No; but the executive officers in the departments concerned in particular and the Police Authorities in the State in general can take action under the above Acts.

	1953.	*1954.*
(*c*) (i) Public Health Act	4	1
(ii) Prevention of Animal Sacrifice Act ...	29	28
(iii) Prevention of Cow Slaughter Act ...	74	153
(iv) Temple Entry Authorisation Act ...		1

ಶ್ರೀ ಟಿ. ಹನುಮಯ್ಯ.—ಈ ಆಕ್ಟ್ಗಳ ವಿಷಯವನ್ನು ವಹಿಸಿರುವುದು ಪೋಲೀಸ್ ಇಲಾಖೆಗೆ?

*ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಟಿ. ಹನುಮಯ್ಯ.—ಇತರ ಡಿಪಾರ್ಟ್ಮೆಂಟುಗಳ ಆಡಳಿತವೇನೂ ಈ ಬಗ್ಗೆ ಇಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಈ ಬಗ್ಗೆ ರೂಲ್ಸ್ ಗಳಾಗಬೇಕು. Rules ಗಳು finalise ಆದಮೇಲೆ ಪಬ್ಲಿಕ್ ಹೆಲ್ತ್ ಇಲಾಖೆಗೆ ಅಧಿಕಾರ ಬರುತ್ತದೆ. ಸದ್ಯಕ್ಕೆ ಪೋಲೀಸ್ ಇಲಾಖೆಯವರೇ ಇವುಗಳ ಬಗ್ಗೆ ಅಧಿಕಾರ ಚಲಾಯಿಸುತ್ತಿದ್ದಾರೆ.

ಶ್ರೀ ಟಿ. ಹನುಮಯ್ಯ.—ಈ ಆಕ್ಟ್ಗಳೆಲ್ಲಾ ಪೋಲೀಸ್ ಡಿಪಾರ್ಟ್ಮೆಂಟಿನ ಸಂಬಂಧ ಪಟ್ಟ ಅಧಿಕಾರಿಗಳಲ್ಲರುತ್ತದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಯಾರು ಕೇಳಿದರೂ ಕೊಡುತ್ತಾರೆ. ಅವರಲ್ಲೂ ಇರುತ್ತದೆ.

ಶ್ರೀ ಟಿ. ಹನುಮಯ್ಯ.—ಗ್ರಾಮಾಂತರಗಳಲ್ಲಿ ದೇವಿ ಜಾತ್ರೆಗಳನ್ನು ನಡೆಸಿ ಪ್ರಾಣಿ ವಧೆ ಮಾಡುತ್ತಿದ್ದಾರಲ್ಲಾ ಅವುಗಳನ್ನು ನಿಲ್ಲಿಸುವುದಕ್ಕೆ ಏನು ಕಾರ್ಯಕ್ರಮ ತೆಗೆದು ಕೊಂಡಿದ್ದೀರಿ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಪ್ರಾಣಿ ವಧೆ ಮಾಡುತ್ತಿದ್ದಾರೆಂದು ಗೊತ್ತಾದರೆ ತಕ್ಕ ಕಾರ್ಯಕ್ರಮ ತೆಗೆದು ಕೊಳ್ಳುತ್ತಾರೆ.

ಶ್ರೀ ಟಿ. ಹನುಮಯ್ಯ.—ಪಾನ ನಿರೋಧ ಜಾರಿಯಲ್ಲಿರುವ ಪ್ರದೇಶದಲ್ಲಿ illicit distillation ಬಗ್ಗೆ ಪ್ರತಿ ತಿಂಗಳೂ ಇಷ್ಟು ಕೇಸುಗಳನ್ನು ಹಾಕಲೇ ಬೇಕೆಂದು insist ಮಾಡಿರುವ ಹಾಗೆ ಈ ಆಕ್ಟ್ಗಳ ವಿಷಯದಲ್ಲೂ ಕೇಸುಗಳನ್ನು ಹಾಕಬೇಕೆಂದು insist ಮಾಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಪ್ರಾಣಿ ವಧೆ ನಡೆದಿದೆಯೆಂದು ಗೊತ್ತಾದಾಗ ಕೇಸುಗಳನ್ನು ಹಾಕಬೇಕೆಂದು ಹೇಳಿದ್ದೇವೆ. ಆದರೆ, ನೀವು ಹೇಳಿದಂತೆ ಕಳ್ಳಬಟ್ಟಿ ಸಾರಾಯಿ ವಿಷಯದಲ್ಲಿ ಇಷ್ಟು ಕೇಸುಗಳನ್ನು ಹಾಕಲೇಬೇಕೆಂದು ನಾವೇನೂ ನಿರ್ಧಾರ ಮಾಡಿಲ್ಲ. ಎಷ್ಟು ಕೇಸುಗಳಾಗುತ್ತವೆಯೋ ಅಷ್ಟು ಕೇಸುಗಳನ್ನು ಹಾಕಬೇಕೆಂದು ಹೇಳಿದ್ದೇವೆ.

ಶ್ರೀ ಟಿ. ಹನುಮಯ್ಯ.—ಗ್ರಾಮಾಂತರಗಳಲ್ಲಿ ದೇವಿ ಜಾತ್ರೆಗಳಲ್ಲಿ ಪ್ರಾಣಿ ವಧೆಗಳು ಬಹಳ ಜಾಸ್ತಿಯಾಗಿ ನಡೆಯುತ್ತಿವೆ. ಗ್ರಾಮಾಂತರಗಳಲ್ಲಿರುವ ಜನರಿಗೆ ಈ ಕಾನೂನುಗಳಿರುವುದು ಗೊತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಸಾಮಾನ್ಯವಾಗಿ ಕಾನೂನಿರುವುದು ಎಲ್ಲರಿಗೂ ಗೊತ್ತಿದೆ. ಗ್ರಾಮ ನೌಕರರಿಗೆ ಇದು ತಿಳಿದಿದೆ. ಈ ರೀತಿಯಾಗಿ ಹೆಚ್ಚಾಗಿ ಪ್ರಾಣಿ ವಧೆ ನಡೆಯುತ್ತಿದೆಯೆಂದು ಗೊತ್ತಾದಾಗ, ಅಥವಾ ಫಿರ್ಯಾದುಗಳು ಬಂದಾಗ ನೋಕ್ತ ಬಂದೋಬಸ್ತು ಮಾಡಿದ್ದಾರೆ.

ಶ್ರೀ ಟಿ. ಹನುಮಯ್ಯ.—ಪ್ರಾಣಿ ವಧೆ ಮಾಡುವ ಇಂಥ ದೇವಿ ಜಾತ್ರೆಗಳನ್ನು ನಡೆಸುವಾಗ ಪಟೇಲ್ ಶಾನುಭೋಗರುಗಳು ಲೈಸೆನ್ಸ್ ತೆಗೆದುಕೊಂಡು ನಡೆಸುತ್ತಿದ್ದಾರಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಪ್ರಾಣಿ ವಧೆ ಮಾಡುವುದಕ್ಕೆ ಲೈಸೆನ್ಸ್ ಕೊಡುವುದಿಲ್ಲ. ಜಾತ್ರ ನಡೆಸುವುದಕ್ಕೆ ಕಾನೂನು ಪ್ರಕಾರ ಲೈಸೆನ್ಸ್ ತೆಗೆದುಕೊಳ್ಳಬೇಕೆಂದಿದ್ದರೆ ಲೈಸೆನ್ಸ್ ತೆಗೆದುಕೊಳ್ಳಬೇಕು.

ಶ್ರೀ ಟಿ. ಹನುಮಯ್ಯ.—ಪೋಲೀಸಿನವರೇ ಅಲ್ಲಗೆ ಹೋಗಿ ಪ್ರಾಣಿ ವಧೆ ಮಾಡಿಸಿ ರಾತ್ರಿಯೆಲ್ಲಾ ಅಲ್ಲೇ ತಂಗಿದ್ದು ಬೆಳಗ್ಗೆ ಎದ್ದು ಬರುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?